# **37** ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

## ಸಿ.ಸಿ. ನಂ. **26750/2019**

ಪ್ರಾ.ಸಃ **1** ಚಾ.ಸಃ **1**

| | |
|---|---|
| ಸಾಕ್ಷಿದಾರರ ಹೆಸರು | ತನುಷ |
| ತಂದೆಂಯ ಹೆಸರು | ನಾಗರಾಜು |
| ವಯಸ್ಸು | 21 ವರ್ಷ |
| ಉದ್ಯೋಗ | ವಿದ್ಯಾರ್ಥಿನಿ |
| ವಿಳಾಸ | ದೇವರ ಚಿಕ್ಕನಹಳ್ಳಿ, ಬೆಂಗಳೂರು. |
| ಪ್ರ. ವ. ಬೋ ದಿನಾಂಕ | 25.11.2022. |

ಮುಖ್ಯ ವಿಚಾರಣೆಃ ಮಾನ್ಯ ಹಿ.ಸ.ಸ. ಅ ರವರಿಂದಃ

ನಾನು 2019 ನೇ ಸಾಲಿನಲ್ಲಿ ಆರ್.ವಿ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದೆ. ದಿ. 29.07.2019 ರಂದು ನಾನು ಮಧ್ಯಾಹ್ನ 01.30 ಗಂಟೆ ಸಮಯದಲ್ಲಿ ಕಾಲೇಜು ಮುಗಿಸಿಕೊಂಡು, ಮನೆಗೆ ಹೋಗುತ್ತಿರುವಾಗ ಕಾಲೇಜು ಹಿಂಭಾಗದ ರಸ್ತೆಯಲ್ಲಿ ಅಂದರೆ ರಾಮಕೃಷ್ಣ ಮೆಡಿಕಲ್ ಹತ್ತಿರ ನಡೆದುಕೊಂಡು ಹೋಗುತ್ತಿದ್ದಾಗ ಯಾರೋ ಹಿಂದುಗಡೆಯಿಂದ ಒಬ್ಬ ವ್ಯಕ್ತಿ ಬೈಕ್ ನಲ್ಲಿ ಬಂದು ನನ್ನ ಕೈನಲ್ಲಿ ಇದ್ದ ವಿವೋ ವೈ-17 ಮೊಬೈಲನ್ನು ಕಿತ್ತುಕೊಂಡು ಪರಾರಿಯಾಗಿರುತ್ತಾನೆ. ಈ ಬಗ್ಗೆ ನಾನು ತಿಲಕ್ ನಗರ ಪೊ.ಠಾಣೆಯಲ್ಲಿ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು, ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಂಜೆ 04 ಗಂಟೆ ಸಮಯದಲ್ಲಿ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿ ಅದಕ್ಕೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಇದಾದ ಎರಡು ತಿಂಗಳ ನಂತರ ಪೊಲೀಸರು ನನ್ನ ಮೊಬೈಲ್ ಸಿಕ್ಕಿರುವುದಾಗಿ ತಿಳಿಸಿದ್ದು ನಾನು ಪೊ.ಠಾಣೆಗೆ ಹೋದಾಗ ನನ್ನ ಮೊಬೈಲ್ ಕಳ್ಳತನ ಮಾಡಿದ ಅಸಾಮಿಯನ್ನು ನನಗೆ ತೋರಿಸಿರುತ್ತಾರೆ ಮತ್ತು ನನ್ನಿಂದ ಅಪಹರಣವಾಗಿದ್ದ ಮೊಬೈಲ್ ಪೋನನ್ನು ನನಗೆ ತೋರಿಸಿದ್ದು, ನಾನು ಸದರಿ ಪೋನನ್ನು ನನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ. ಸದರಿ ಮೊಬೈಲ್ ಪೋನನ್ನು ಈಗ ಭಾವಚಿತ್ರದಲ್ಲಿ ನೋಡಿ ಗುರುತಿಸುತ್ತೇನೆ ಸದರಿ ಪೋಟೋವನ್ನು ನಿಪಿ.3 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿದ ಬಗ್ಗೆ ನಾನು ಪೊಲೀಸರ ಮುಂದೆ

ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ಈಗ ವಿಸಿ ಮೂಲಕ ಹಾಜರು ಪಡಿಸಿದ್ದು, ಆತನನ್ನು ನೋಡಿ ಗುರುತಿಸುತ್ತೇನೆ.

ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದಃ

ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ    ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ